ಪಡದ ಮಾತುಗಳಿಗೆಲ್ಲಾ ಬಂದ್ಬಿಡ್ತೀಯ. ಎಲ್ಲಕ್ಕೂ ನನ್ನದೂ ಒಂದು ಕಂಬ್ಳಿ ಇದೆ ಅಂತ ಹಾಸೋಕೆ ಬಂದ್ಬಿಡ್ತಿಯ... ಈಗ ನಿನ್ನನ್ನು ಯಾರಾದ್ರೂ ಅಭಿಪ್ರಾಯ ಕೇಳಿದ್ರೇನು...? ನಿನಗೆ ಸಂಬಂಧಿಸೇ ಇರೊ ವಿಷಯಕ್ಕೆ ನೀನು ಮಧ್ಯೆ ಬಾಯಿ ಹಾಕ್ಬೇಡ... ಈಗ ಪ್ರಸಾದ ಸುಮ್ನೆ ಕೂತಿಲ್ವಾ..? ಹಾಗಿರ್ಬೇಕು...

'ನಾವ್ ಹಳ್ಳೀ ಮದ... ನಾವು ಮಾತಾಡೂದು ಎದೀಲಿರೊ ಮಾತು... ಈ ಶಹರಿನವರ್ಹಂಗ ಒಳೀಕ್ ಒಂದು ಹೊರಕ್ಕೊಂದು ಮಾತಾಡ್ಲಿಕ್ಕೆ ಬರೂ ಹಂಗಿಲ್ಲ... ನಮ್ದು ಸಾಫ್‌ಸೀದಾ...'

'ನೀನೀಗ ಹಳ್ಳೀಲಿ ಇಲ್ಲ... ಇರೋದು ಮೈಸೂರು ಪಟ್ಟಣದಲ್ಲಿ. ಇಲ್ಲಿನ ರೀತಿಲಿ ಇರ್ಬೇಕಾಗತ್ತೆ.... ಯಾಕೆ ಇಲ್ಲಿ ಬಂದಿದ್ದಿ...?!

ನಿನ್ನ ಹಳ್ಳೀಗೇ ಹೋಗಿ ಬಿಡು... ನಿನ್ನ ಯಾರು ತಡೀತಾರೆ...?' ಶ್ರೀಧರ ಭಟ್ಟರ ಮಾತು ಶಿವಣ್ಣನಿಗೆ ಬಾಯಿಗೆ ಮೆಣಸಿನಕಾಯಿ ತುರುಕಿದಂತಾಯಿತು!

ಮಗು ಈಗ ತಾಯಿಯ ಕೈ ಹಿಡಿದು ನಿಂತುಕೊಂಡಿತ್ತು. ಅವಳನ್ನೇ ನೋಡುತ್ತ ಶಿವಣ್ಣ ಪುನಃ ಆ ಹುಡುಗಿ ಮೇಲೆ ಮತ್ತೊಂದು ಬಾಣ ಬಿಟ್ಟ.

'ಭಟ್ರೇ... ಸಿಟ್ಟಾಗಿ ನನ್ನ ಬಾಯಿ ಮುಚ್ಚಿಸಬ್ಯಾಡ್ರೀ... ಅದ್ರಿಂದ ಯಾನೂ ಒಳ್ಳೆದು ಆಗಾಹಂಗಿಲ್ಲ... ಈ ಗಂಗಿ ನಮ್ಮೂರು ಕಡಿಯಾಕೀ ಅದಾಳೆ... ನಾನು ಹೇಳೋದು ಅವ್ಳಿಗೆ ಅರಿವಾಗ್ಲಿಕ್ಕೆ ಹತ್ತೇದಿ... ಈ ಪಾರೋಳ ತಂದಿ ಯಾರು ಅಂಬೋದು ಈಕಿ ಹೇಳಬಲ್ಲಳು ಯಾಕಾ...? ಯಾನ ಗಂಗೀ... ಆಕ್ಲಾಗೆ ಹೇಳಿ ಬಿಡಲ್ಲಾ...! ಯಾರು ತಂದಿ...?'

ಗಂಗೆ ಬದಲಾಗಿ ಪಾಪೂನೇ ತಟ್ಟನೆ ಉತ್ತರಿಸಿಬಿಟ್ಟಳು', ನನ್ನ ಅಪ್ಪಾಜಿ... ನನ್ನ ಅಪ್ಪಾಜಿ ದೇವ್ರಾ ಅದಾರ... ಅವ್ರ ಹೆಸ್ರು ದ್ಯಾವ್ರು.'

ತಾಯಿ ಹಳಿಕೊಟ್ಟಿದ್ ಗಿಳಿಪಾಠ ಮಗು ಒಪ್ಪಿಸಿತು.

ಅವಳ ಮಾತು ಕೇಳಿ ಶಿವಣ್ಣ ಕುಹುಕವಾಗಿ ನಗುತ್ತಾ, ಪಕ್ಕದಲ್ಲಿದ್ದ ಪ್ರಸಾದನ ಕಿವಿಯಲ್ಲಿ ಅದೇನೊ ಅಶ್ಲೀಲವಾದ ಮಾತು ಹೇಳಿ, ತನ್ನ ಪರಿಹಾಸ ತಾನೇ ಮೆಚ್ಚಿಕೊಂಡಾಗ, ಅವನ ದೇಹ ಭಾಷೆಯನ್ನು ಗಮನಿಸಿದ ಗಂಗೆಗೆ ವಾಕರಿಕೆ ಬರುವಂತಾಯಿತು. ಅವನ ಕುರೂಪ ದೇಹದ ಮೇಲಿದ್ದ ದೃಷ್ಟಿಯನ್ನು ತಾರಸಿಗೆ ಎಸೆದು, ಮಾತುಗಳನ್ನು ಕಕ್ಕಿದಳು,

'ಈ ಕೂಸನ್ನ ದ್ಯಾವ್ರೇ ಕೊಟ್ಟದ್ದು... ನಾನು ಸಂತೋಷ ಕಾಣಬೇಕೂಂತ ಆ ಪರಮಾತ್ಮ ಕಳ್ಸಿಕೊಟ್ಟಾನ.... ದೇವ್ರ ಕೂಸನ್ನ ಕಂಡು ಯಾರೂ ನಗಾಡಬಾರ್ದು ಮತ್ತ... ಇವ್ಳು ನನ್ನ ಜೀವ ಕಷ್ಟಸುಖ ಎಲ್ಲಾ ನಾನು ಇವ್ಳಿಂದಾನೇ ನೋಡ್ಲಿಕ್ ಹತ್ತೀನಿ... ಇವ್ಳಿಲ್ಲದಿದ್ರೆ ನಾನು ಪ್ರಾಣ ಬಿಟ್ಟೇನು...!'

ಸುನಂದ ಬನ್ನಪ್ಪ ಹೇಳಿದರು, 'ಯಾಕೆ ಸಿಟ್ಟಾಗ್ತೀಯಾ ಗಂಗಾ... ನಿನ್ನ ಕಷ್ಟ ನನಗಂತೂ ಗೊತ್ತಿದೆ... ಅದಕ್ಕೇ ಮಗೂಗೆ ಏನಾದ್ರೂ ಒಳ್ಳೆ ದಾರಿ ತೋರಿಸ್ಕೊಡಬೇಕು ಅಂತ ನಾನಿದ್ದೀನಿ... ಬೆಂಗ್ಳೂರಲ್ಲಿ ಶಾಲೆ ತುಂಬಾ ಚೆನ್ನಾಗಿದೆ... ಬಡವರ ಮಕ್ಕಳಿಗೆ ವಸತಿ, ಊಟ, ಬಟ್ಟೆ ಎಲ್ಲ ಅವ್ರ ಖರ್ಚಲ್ಲೇ ಮಾಡ್ತಾರೆ... ನೀನು ನಿಶ್ಚಿಂತೆಯಿಂದ ಇರಬಹುದು...'

'ಇಲ್ರೀ ಮ್ಯಾಡಂ ಅವ್ರೇ... ಈ ಕೂಸಿನ ಜವಾಬ್ದಾರಿ ನೀನೇ ಹೊರಬೇಕು ಅಂತ ಆ ದೇವ್ರು ಈಕೀನ ನನ್ನ ಮಡ್ಲಿಗೇ ಹಾಕ್ಯಾನೆ... ನಾನು ಈಕೀನ ದೂರ ಕಳಸ್ಲಾರೆ...' ಎಂದು ಪ್ರಸಾದನನ್ನು ನೋಡಿದಳು. ಮತ್ತೆ, ಅವನನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತ,

'ನೀವಾರಾ ಹೇಳ್ರಲ್ಲಾ... ನಾನು ಕೂಲಿ ಮಾಡಾಕೆ ಬಂದು ಸೇರ್ಕಂಡ ಕಾಲದಿಂದ ನೀವು ಹತ್ರ ನೋಡಿರಿ. ನಾನೆಂತಾಕಿ ಅಂಬೋದು ನೀವಾರ ಛಲೊ ತಿಳಿದೀರಿ... ನೀವ್ ಹೇಳ್ರಿ... ನಾನು ಈ ಸಣ್ಣ ಪೋರೀನ ದೂರದ ಬೆಂಗಳೂರಿಗೆ ಕಳುಹಿಸ್ಲಾ...? ಅವ್ರು ಕೂಡ ನನ್ನನ್ನೂ ಕಳಸದ್ರೆ ಮಾತ್ರಾ ಬೆಂಗಳೂರಿನ ಮಾತು ಇಲ್ದಿದ್ರ ಇಲ್ಲೇ ಇರ್ಲಿಕ್ ಹತ್ತೀವಿ... ಹುಟ್ಟಿಸಿದ ದೇವರು ಯಾನೊ ಒಂದು ಹಾದಿ ಈ ಕೂಸಿಗೆ ಇಟ್ಟೇ ಇರ್‍ತಾನಾ... ಹೌದಲ್ಲೊ...? ನಾನು ನನ್ನ ಮಗುನ ಬಿಟ್ಟಿರ್ಲಾರೆ...' ತಲೆ ಮೇಲಿನ ಸೆರಗು ಸರಿಪಡಿಸಿಕೊಳ್ಳುತ್ತಾ ಮಾತು ಮುಗಿಸಿದಳು.

ಬಿಳಿಚಿಕೊಂಡು ತೆಳ್ಳಗಾಗುತ್ತಾ ಹೋಗಿದ್ದ ಪ್ರಸಾದ ಎಂದಿನ ಅಭ್ಯಾಸದಂತೆ ಸಮಸ್ಯೆ ಬಂದಾಗ ಎದೆ ಮೇಲೆ ಕೈ ಇಟ್ಟುಕೊಂಡ. ಸುತ್ತಾ ಕಪ್ಪಾಗಿ ಬಿಟ್ಟಿದ್ದ ಅವನ ದೊಡ್ಡ ದೊಡ್ಡ ಕಣ್ಣುಗಳು ಇನ್ನಷ್ಟು ಬಿರಿಯುವಂತಾಗಿ, ಅವನ ಬಾಯಿಂದ ಮಾತು ಹೊರಬಿದ್ದಿತು.

'ಹೌದು, ಇವಳು ಹೇಳುವ ಮಾತಿನಲ್ಲಿ ಅರ್ಥವಿದೆ.' ಕೋಣೆ ತುಂಬುವ ಆಳವಾದ ದನಿ ತೆಗೆದು ಅವನು ಹೇಳುತ್ತಾ ಹೋದ...' ಈಕೆ ಮಾತಲ್ಲಿ ತಾಯಿಯ ಸಹಜವಾದ ಕಾಳಜಿಯೂ ಇದೆ. ಯಾರಿಗೂ ತೊಂದರೆ ಕೊಡದೆ ತಾನೊಬ್ಬಳೇ ತನ್ನ ಕರುಳ ಕುಡಿಯನ್ನು ಬೆಳೆಸಬೇಕೆಂಬ ಸಂಕಲ್ಪ ಗಂಗಾ ಮಾಡಿದ್ದಾಳೆ. ಇಂತಹ ಸಂಕಲ್ಪ ಶಕ್ತಿ ಎಲ್ಲ ತಾಯಂದಿರಲ್ಲೂ ಹುಟ್ಟಿ ಬರುವುದಿಲ್ಲ. ಹೊಣೆ ಎಲ್ಲಾ ತನ್ನ ಮೇಲೇ ಬಿದ್ದಿದೆ ಎಂದು ಇವಳು ಯಾವತ್ತೂ ಯಾರನ್ನೂ ದೂಷಿಸಿದವಳಲ್ಲ. ತಾಯಿಯ ಪವಿತ್ರತೆಯನ್ನು ಮಾತ್ರಾ ಇವಳು ಕಾಪಾಡಿಕೊಂಡು ಬಂದಿದ್ದಾಳೆ. ಈ ಬಾಂಧವ್ಯ ಹೀಗೇ ಇರಲು ನಾವು ಬಿಡಬೇಕಲ್ಲವೆ...?'

ಸುನಂದ ನಡುವೆಯೇ ಕೇಳಿದ್ದು, 'ಪ್ರಸಾದ, ಮಾತು ಅರ್ಥವಾಗುತ್ತಿಲ್ಲ... ಸ್ವಲ್ಪ ಬಿಡಿಸಿ ಹೇಳಬಾರದೆ...?'

ಅವನೆಂದ, 'ನಾನು ಹೇಳುವುದಿಷ್ಟು... ನಮ್ಮ ಜೀವನದಲ್ಲಿ ಎಲ್ಲವೂ ದೈವೇಚ್ಛೆ. ಅವನು ಮಾಡುವುದನ್ನು ನಾವು ತಿದ್ದಲಾರೆವು. ಒಂಟಿಯಾಗಿ ನಿಂತು ತನ್ನ ಕೂಸನ್ನು ತಾನೊಬ್ಬಳೇ ಬೆಳೆಸಿ ದೊಡ್ಡವಳನ್ನಾಗಿಸುತ್ತೇನೆಂದು ಧೈರ್ಯವಾಗಿ ನಿಂತವಳನ್ನು ನಾವು ಅರಿತುಕೊಳ್ಳುವ ಪ್ರಯತ್ನ ಮಾಡಬೇಕು. ತಾಯಿ ಸಮಾಜದ ದೂಷಣೆಗೆ ಒಳಗಾಗಿ ನಿತ್ಯ ನಲುಗುತ್ತಿದ್ದಾಳೆ. ಆದರೂ ಯಾರೊಬ್ಬರ ಸಹಾಯವನ್ನೂ ಬಿಡದೆ, ಯಾರ ನಿಂದನೆಗೂ ಹೆದರಿ, ಮಗುವನ್ನು ಹುಟ್ಟಿದಾಗಲೇ ಕೊಂದು ಹಾಕದೆ, ಆಪ್ತತೆಯಿಂದ ಬೆಳೆಸು ತ್ತಿದ್ದಾಳೆ. ಈ ಮಗುವಿಗೆ ಜನ್ಮ ಕೊಟ್ಟವನು ಅದೆಲ್ಲಿದ್ದರೂ ಅವನು ಪಾಪ ಪ್ರಜ್ಞೆಯಿಂದ ಬಿಡುಗಡೆ ಹೊಂದಲಾರ. ಅವನ ಮಾನ ಜನಮಾನಸದಲ್ಲಿ ಭದ್ರವಾಗಿದ್ದರೂ, ಒಳಗಿನ ಹುಳುಕು ಇದ್ದೇ ಇರುತ್ತೆ. ಇದು ದೈವ ನಿಯಮ!'

ಆಗ ಶ್ರೀಧರ ಭಟ್ಟರು ಅಂದರು, 'ಹೌದು. ಹೀಗೆ ಅನೈತಿಕವಾಗಿ ಹುಟ್ಟಿದ ಮಕ್ಕಳನ್ನು ತಮ್ಮ ಮರ್ಯಾದೆ ಕಾಪಾಡಿಕೊಳ್ಳಲು ಕೊಂದುಬಿಡುತ್ತಾರೆ. ಕುತ್ತಿಗೆ ಹಿಸುಕಿ ಬಿಸಾಡಬಹುದು, ಬಾಯಿಗೆ ಹೊಟ್ಟು ತುಂಬಿಸಿ ಉಸಿರು ಕಟ್ಟಿಸಬಹುದು, ಇಲ್ಲವೆ ಸ್ವಲ್ಪ ದಯೆ ತೋರಿ ಹುಟ್ಟಿದ ಕೂಸನ್ನು ಅನಾಥಾಶ್ರಮದ ತೊಟ್ಟಿಲಲ್ಲೊ ಹಾಕಿ ಕೈ ಒದರಿಕೊಳ್ಳುವುದೂ ಉಂಟು... ಅಂತಹ ಪಾಪಕಾರ್ಯ ಈ ಹೆಂಗಸು ಮಾಡಿಲ್ಲ' ಎಂದು ಹೇಳಿ ನಂತರ ಶಿವಣ್ಣನ ಕಿವಿಯಲ್ಲಿ ಯಾರಿಗೂ ಕೇಳದಂತೆ ಉಸುರಿದರು,

ಅನೀತಿಯ ಕಾರ್ಯ ಇವಳು ಮಾಡಿ ಪಶ್ಚಾತ್ತಾಪ ಪಡುತ್ತಿರುವುದಕ್ಕಿಂತಾ ಜಾಸ್ತಿ ಈ ಮಗೂನ ತಂದೆ ಅನುಭವಿಸುತ್ತಲೂ ಇರಬಹುದು. ಗುಟ್ಟಾಗಿ ಅವನು, ಏನು ಗೊಂದಲದಲ್ಲಿರುತ್ತಾನೊ ಏನೊ... ಇಲ್ಲವೇ 'ಬೀಸೋದೊಣ್ಣೆ ತಪ್ಪಿ'ತಲ್ಲಾ ಎಂದು ನಿಸೂರಾಗಿ ಎಲ್ಲೊ ಹಾಯಾಗಿದ್ದಾನೋ ಏನೋ ಯಾರಿಗೆ ಗೊತ್ತು... ಆದ್ರೂ 'ಕಳ್ಳನ ಮನಸ್ಸು ಹುಳ್ಳ ಹುಳ್ಳ'ಗೆ ಅನ್ನೋ ಹಾಗೆ ಎಷ್ಟಾದರೂ ಮನಸ್ಸು ಕುಟುಕದೇ ಇರದು...!'

ಶಿವಣ್ಣ ಪಿಸುಗುಟ್ಟಿದ 'ಬಿಡ್ರಪ್ಪಾ... ಅದೇನ್ಹಂಗೆ ಇರೂದಿಲ್ಲ... ಗಂಡಸರ್ನ ದ್ಯಾವ್ರು ಹಂಗೇ ಮಾಡಿರೋದು. ಅವ್ನು ಹಂಗೆ ಒಳ್ಳೇ ಛಲೊ ಮನ್ಸ ಆಗಿದ್ರ, ಅವ್ನೇ ಒಪ್‌ಕೊಂಡ್ ಎದ್ರಿಗೆ ಬರ್ತಿದ್ದ... ಇಂತಾ ಬೇವಾರ್ಸಿಗಳು ಲಗ್ನ ಆಗ್‌ದಿರಾ ಹೆಣ್ಣಿಗೆ ಹುಟ್ಟಿದ ಪಿಂಡಾನ ತನ್ನದೂ ಅಂತ ಒಪ್ಕಾತಾರೇನ...? ಈಕೀತಾವ ಹಣ–ಕಾಸು, ನೆಂಟ್ರು ಇಷ್ಟು ಅಂತ ಇದಾರೇನು...? ಹೇಳಿ ಕೇಳಿ ಒಂಟಿ ಹೆಣ್ಣು!... ಆ ಮನಷ್ಯ ಸಾಹುಕಾರಾ ಇರ್ತೋದು... ಈ ವ್ಯಾಳೆಗೆ ಅಂವ ಬ್ಯಾರೆ ಲಗ್ನ ಆಗಿ ಸುಖವಾಗಿ ಇರ್ತೋದು...'

ವಯಸ್ಸಾದ ಶ್ರೀಧರ ಭಟ್ಟರ ಅಭಿಪ್ರಾಯವೇ ಬೇರೇ ಇತ್ತು.

'...ಗಂಗ ತನ್ನ ಕೂಸು ದೊಡ್ಡೋಳಾಗೊ ತನಕ ತಾನೇ ಇಟ್ಕಂಡು ಇರ್‍ಲಿ... ಮಗೂಗೆ ತೀರಾ ಸಣ್ಣ ವಯಸ್ಸು... ಇಷ್ಟು ಬೇಗ ತಾಯಿಂದ ದೂರ ಮಾಡೋದೂ ಸರಿ ಇರಲ್ಲ..'

ಪ್ರಸಾದ ಮುಂದೆ ಬಂದು ಮಾತಾಡಿದ, 'ಅಪ್ಪ, ನೀವು ಹೇಳೋದು ಸರಿಯಾಗಿದೆ... ಈಗ್ಲೇ ಮಗೂನ ತಾಯಿಂದ ಬೇರ್ಪಡಿಸೋದು ಒಳ್ಳೇದಲ್ಲ...'

'ನೀವೇನಂತಿರಾ ಸುನಂದಮ್ನೋರೆ...? ನನ್ನ ಮಗಂದೂ ನನ್ನದೇ ಅಭಿಪ್ರಾಯ... ನೀವೂ ಒಪ್ತಿರಾ...?' ಎಂದು ಶ್ರೀಧರ ಭಟ್ಟರು ಸುನಂದ ಬನ್ನಪ್ಪನವರತ್ತ ನೋಡಿದರು.

(ಸಶೇಷ)